# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೧<br>Part – I | ಬೆಂಗಳೂರು, ಬುಧವಾರ, ೦೧, ಜುಲೈ, ೨೦೨೬ (ಆಷಾಢ, ೧೦, ಶಕವರ್ಷ, ೧೯೪೮)<br>BENGALURU, WEDNESDAY, 01, JULY, 2026 (ASHADHA, 10, SHAKAVARSHA, 1948) | ನಂ. ೪೭೫<br>No. 475 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳಸಾಪೂರ ಗ್ರಾಮದ ರಿ.ಸ.ನಂ: 242/*/1ರ 4 ಎಕರೆ 11 ಗುಂಟೆ, ರಿ.ಸ.ನಂ: 242/*/2ರ 4 ಎಕರೆ 7 ಗುಂಟೆ, ರಿ.ಸ.ನಂ: 242/*/3ರ 4 ಎಕರೆ 7 ಗುಂಟೆ, ರಿ.ಸ.ನಂ: 242/*/4ರ 4 ಎಕರೆ 38 ಗುಂಟೆ, 242/*/5ರ 8 ಗುಂಟೆ, 242/*/6ರ 8ಗುಂಟೆ, 242/*/7ರ 8ಗುಂಟೆ ಮತ್ತು 242/*/8ರ 12 ಗುಂಟೆ ಸೇರಿ ಒಟ್ಟು 18 ಎಕರೆ 19 ಗುಂಟೆ (39 ಗುಂಟೆ ಕಾಲುವೆಗಾಗಿ ಭೂಸ್ವಾಧೀನಗೊಂಡ ಜಮೀನು ಹೊರತುಪಡಿಸಿ) ಜಮೀನಿನಲ್ಲಿ 50:50ರ ಅನುಪಾತದಲ್ಲಿ ರೈತರು ಹಾಗೂ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ವಸತಿ ಯೋಜನೆಯನ್ನು ರೂ. 19.69 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ನಅಪ್ರಾಗಬೆ / ವ.ಯೋ / 1450 / 2024-25 ದಿನಾಂಕ:13.01.2025
2. ಸರ್ಕಾರದ ಪತ್ರ ಸಂಖ್ಯೆ: ನಅಇ 193 ಬೆಮಪ್ರಾ 2016 ದಿನಾಂಕ:17.01.2025
3. ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ನಅಪ್ರಾಗಬೆ / ವ.ಯೋ / 720-721 / 2025-26 ದಿನಾಂಕ: 10.07.2025
4. ಸರ್ಕಾರದ ಪತ್ರ ಸಂಖ್ಯೆ: ನಅಇ 323 ಬೆಮಪ್ರಾ 2024 ದಿನಾಂಕ: 18.11.2025
5. ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ನಅಪ್ರಾಗಬೆ / ವ.ಯೋ / 1570 / 2025-26, ದಿನಾಂಕ: 23.03.2026 ಮತ್ತು 18.04.2026

******

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಪತ್ರದಲ್ಲಿ ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ರವರು ಗದಗ ತಾಲ್ಲೂಕು ಕಳಸಾಪೂರ ಗ್ರಾಮದ ರಿ.ಸ.ನಂ: 242/*/1ರ ಪೈಕಿ ಕ್ಷೇತ್ರ:03 ಎಕರೆ 37 ಗುಂಟೆ, ರಿ.ಸ.ನಂ: 242/*/2ರ 03 ಎಕರೆ 34 ಗುಂಟೆ, ರಿ.ಸ.ನಂ: 242/*/3ರ ಪೈಕಿ ಕ್ಷೇತ್ರ:03 ಎಕರೆ 34 ಗುಂಟೆ, ರಿ.ಸ.ನಂ: 242/*/4ರ 4 ಎಕರೆ 24 ಗುಂಟೆ, ಒಟ್ಟು ಕ್ಷೇತ್ರ:16 ಎಕರೆ

09 ಗುಂಟೆ ಜಮೀನಿನಲ್ಲಿ ವಸತಿ ಯೋಜನೆ ಮತ್ತು ಭೂ ಸ್ವಾಧೀನಪಡಿಸಿಕೊಳ್ಳಲು ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ:17.01.2025ರ ಪತ್ರದಲ್ಲಿ ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಗದಗ ತಾಲ್ಲೂಕು ಕಳಸಾಪೂರ ಗ್ರಾಮದ ರಿ.ಸ.ನಂ: 242/*/1ರ ಪೈಕಿ ಕ್ಷೇತ್ರ:03 ಎಕರೆ 37 ಗುಂಟೆ, ರಿ.ಸ.ನಂ: 242/*/2ರ 03 ಎಕರೆ 34 ಗುಂಟೆ, ರಿ.ಸ.ನಂ: 242/*/3ರ ಪೈಕಿ ಕ್ಷೇತ್ರ:03 ಎಕರೆ 34 ಗುಂಟೆ, ರಿ.ಸ.ನಂ: 242/*/4ರ 4 ಎಕರೆ 24 ಗುಂಟೆ, ಒಟ್ಟು ಕ್ಷೇತ್ರ:16 ಎಕರೆ 09 ಗುಂಟೆ ಜಮೀನಿನಲ್ಲಿ ವಸತಿ ಯೋಜನೆಯನ್ನು ರೂ. 1477.00 ಲಕ್ಷಗಳಲ್ಲಿ ಕೈಗೊಳ್ಳಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳು ಕಲಂ 15(1)(ಬಿ) ರನ್ವಯ ಸರ್ಕಾರದ ಪೂರ್ವಾನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪತ್ರದಲ್ಲಿ ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ರವರು ಕಳಸಾಪುರ ಗ್ರಾಮದ ರಿ.ಸ.ನಂ:242/*/1ರ ಪೈಕಿ ಕ್ಷೇತ್ರ: 03 ಎಕರೆ 37 ಗುಂಟೆ, ರಿ.ಸ.ನಂ: 242/*/2ರ ಪೈಕಿ ಕ್ಷೇತ್ರ: 03ಎಕರೆ 34 ಗುಂಟೆ, ರಿ.ಸ.ನಂ:242/*/3ರ ಪೈಕಿ ಕ್ಷೇತ್ರ: 03ಎಕರೆ 34ಗುಂಟೆ , ರಿ.ಸ.ನಂ:242/*/4ರ ಪೈಕಿ ಕ್ಷೇತ್ರ: 04ಎಕರೆ 24 ಗುಂಟೆ ಒಟ್ಟು ಕ್ಷೇತ್ರ: 16ಎಕರೆ 09 ಗುಂಟೆ ಜಮೀನುಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಕಲಂ 15(1)(ಬಿ) ರನ್ವಯ ವಸತಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರ ಪೂರ್ವಾನುಮತಿಯನ್ನು ನೀಡಲಾಗಿದ್ದು ಈಗ ಪರಿಷ್ಕೃತ ಗದಗ ತಾಲ್ಲೂಕು, ಕಳಸಾಪೂರ ಗ್ರಾಮದ ರಿ.ಸ.ನಂ:242/*/1ರ ಪೈಕಿ ಕ್ಷೇತ್ರ: 04 ಎಕರೆ 11 ಗುಂಟೆ, ರಿ.ಸ.ನಂ: 242/*/2ರ ಪೈಕಿ ಕ್ಷೇತ್ರ: 04ಎಕರೆ 07ಗುಂಟೆ, ರಿ.ಸ.ನಂ:242/*/3ರ ಪೈಕಿ ಕ್ಷೇತ್ರ: 04ಎಕರೆ 07ಗುಂಟೆ , ರಿ.ಸ.ನಂ:242/*/4ರ ಪೈಕಿ ಕ್ಷೇತ್ರ: 04ಎಕರೆ 38 ಗುಂಟೆ , 242/*/5 ರ ಕ್ಷೇತ್ರ 0ಎಕರೆ 08ಗುಂಟೆ, 242/*/6ರ ಕ್ಷೇತ್ರ: 0ಎಕರೆ 08ಗುಂಟೆ, 242/*/7 ರ ಕ್ಷೇತ್ರ:0ಎಕರೆ 08 ಗುಂಟೆ ಮತ್ತು 242/*/8 ರ ಕ್ಷೇತ್ರ:0ಎಕರೆ 12ಗುಂಟೆ ಒಟ್ಟು ಕ್ಷೇತ್ರ: 18ಎಕರೆ 19ಗುಂಟೆ (0ಎಕರೆ 39ಗುಂಟೆ ಕಾಲುವೆಗಾಗಿ ಭೂಸ್ವಾಧೀನಪಡಿಸಿಕೊಂಡ ಜಮೀನು ಹೊರತುಪಡಿಸಿ) ಜಮೀನುಗಳಲ್ಲಿ ಪ್ರಾಧಿಕಾರದಿಂದ 50:50 ಅನುಪಾತದಲ್ಲಿ ವಸತಿ ಯೋಜನೆ ಕೈಗೊಳ್ಳಲು ಸರ್ಕಾರದ ಪರಿಷ್ಕೃತ ಪೂರ್ವಾನುಮತಿ ನೀಡಲು ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ದಿನಾಂಕ:18.11.2025ರ ಪತ್ರದಲ್ಲಿ ಗದಗ ತಾಲ್ಲೂಕು, ಕಳಸಾಪೂರ ಗ್ರಾಮದ ರಿ.ಸ.ನಂ:242/*/1ರ ಪೈಕಿ ಕ್ಷೇತ್ರ: 04 ಎಕರೆ 11 ಗುಂಟೆ, ರಿ.ಸ.ನಂ: 242/*/2ರ ಪೈಕಿ ಕ್ಷೇತ್ರ: 04ಎಕರೆ 07ಗುಂಟೆ, ರಿ.ಸ.ನಂ:242/*/3ರ ಪೈಕಿ ಕ್ಷೇತ್ರ: 04ಎಕರೆ 07ಗುಂಟೆ , ರಿ.ಸ.ನಂ:242/*/4ರ ಪೈಕಿ ಕ್ಷೇತ್ರ: 04ಎಕರೆ 38 ಗುಂಟೆ , 242/*/5 ರ ಕ್ಷೇತ್ರ 0ಎಕರೆ 08ಗುಂಟೆ, 242/*/6ರ ಕ್ಷೇತ್ರ: 0ಎಕರೆ 08ಗುಂಟೆ, 242/*/7 ರ ಕ್ಷೇತ್ರ:0ಎಕರೆ 08 ಗುಂಟೆ ಮತ್ತು 242/*/8 ರ ಕ್ಷೇತ್ರ:0ಎಕರೆ 12ಗುಂಟೆ ಒಟ್ಟು ಕ್ಷೇತ್ರ: 18ಎಕರೆ 19ಗುಂಟೆ (0ಎಕರೆ 39ಗುಂಟೆ ಕಾಲುವೆಗಾಗಿ ಭೂ ಸ್ವಾಧೀನಪಡಿಸಿಕೊಂಡ ಜಮೀನು ಹೊರತುಪಡಿಸಿ) ಜಮೀನುಗಳಲ್ಲಿ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೊಳ್ಳಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳು ಕಲಂ 15(1)(ಬಿ) ರನ್ವಯ ಸರ್ಕಾರದ ಪೂರ್ವಾನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಪತ್ರದಲ್ಲಿ ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ರವರು ಶೇ.50:50ರ ಅನುಪಾತದಲ್ಲಿ ರೈತರು ಹಾಗೂ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ಕಳಸಾಪೂರ ಗ್ರಾಮದ ರಿ.ಸ.ನಂ: 242/*/1ರ 4 ಎಕರೆ 11 ಗುಂಟೆ, ರಿ.ಸ.ನಂ: 242/*/2ರ 4 ಎಕರೆ 7 ಗುಂಟೆ, ರಿ.ಸ.ನಂ: 242/*/3ರ 4 ಎಕರೆ 7 ಗುಂಟೆ, ರಿ.ಸ.ನಂ: 242/*/4ರ 4 ಎಕರೆ 38 ಗುಂಟೆ, 242/*/5ರ 8 ಗುಂಟೆ, 242/*/6ರ 8 ಗುಂಟೆ, 242/*/7ರ 8 ಗುಂಟೆ ಮತ್ತು 242/*/8ರ 12 ಗುಂಟೆ ಸೇರಿ ಒಟ್ಟು 18 ಎಕರೆ 19 ಗುಂಟೆ (39 ಗುಂಟೆ ಕಾಲುವೆಗಾಗಿ ಭೂಸ್ವಾಧೀನಗೊಂಡ ಜಮೀನು ಹೊರತುಪಡಿಸಿ) ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸಲು ಉದ್ದೇಶಿಸಿ ಯೋಜನೆಯ ಅಂದಾಜು ಪಟ್ಟಿಯನ್ನು ರೂ.17.90 ಕೋಟಿಗಳಿಗೆ + ರೂ. 1.79 ಕೋಟಿಗಳು (10% ರಷ್ಟು ಆಡಳಿತಾತ್ಮಕ

ವೆಚ್ಚ) = ರೂ. 19.69 ಕೋಟಿಗಳ ಮೊತ್ತಕ್ಕೆ ಅಂದಾಜು ಪಟ್ಟಿ ತಯಾರಿಸಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 323 ಬೆಮಪ್ರಾ 2024 (ಇ-ಕಡತ), ಬೆಂಗಳೂರು, ದಿನಾಂಕ:30.06.2026**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳಸಾಪೂರ ಗ್ರಾಮದ ರಿ.ಸ.ನಂ: 242/*/1ರ 4 ಎಕರೆ 11 ಗುಂಟೆ, ರಿ.ಸ.ನಂ: 242/*/2ರ 4 ಎಕರೆ 7 ಗುಂಟೆ, ರಿ.ಸ.ನಂ: 242/*/3ರ 4 ಎಕರೆ 7 ಗುಂಟೆ, ರಿ.ಸ.ನಂ: 242/*/4ರ 4 ಎಕರೆ 38 ಗುಂಟೆ, 242/*/5ರ 8 ಗುಂಟೆ, 242/*/6ರ8ಗುಂಟೆ, 242/*/7ರ 8 ಗುಂಟೆ ಮತ್ತು 242/*/8ರ 12 ಗುಂಟೆ ಸೇರಿ ಒಟ್ಟು 18 ಎಕರೆ 19 ಗುಂಟೆ (39 ಗುಂಟೆ ಕಾಲುವೆಗಾಗಿ ಭೂಸ್ವಾಧೀನಗೊಂಡ ಜಮೀನು ಹೊರತುಪಡಿಸಿ) ಜಮೀನಿನಲ್ಲಿ 50:50ರ ಅನುಪಾತದಲ್ಲಿ ರೈತರು ಹಾಗೂ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ವಸತಿ ಯೋಜನೆಯನ್ನು ರೂ. 19.69 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**ಷರತ್ತು:**

1. ಪ್ರಸ್ತಾಪಿತ ವಸತಿ ಯೋಜನೆಗೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಕೋರತಕ್ಕದ್ದಲ್ಲ.

2. ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ವಸತಿ ಯೋಜನೆಯ ಕರಡು ನಕ್ಷೆಯಲ್ಲಿ ಯಾವುದೇ ಬದಲಾವಣೆಗಳು ಇಲ್ಲದಿರುವ ಬಗ್ಗೆ ಧೃಡಿಕರಿಸಿಕೊಂಡ ನಂತರವೇ ಸಕ್ಷಮ ತಾಂತ್ರಿಕ ಪ್ರಾಧಿಕಾರದಿಂದ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಆಹ್ವಾನಿಸುವುದು.

3. ಅಂದಾಜು ಪಟ್ಟಿ ತಯಾರಿ ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಸುತ್ತೋಲೆ ಸಂಖ್ಯೆ: ಆಇ 395 ವೆಚ್ಚ-12/2023, ದಿನಾಂಕ: 24.07.2023 ರಲ್ಲಿ ವಿವರಿಸಿರುವಂತೆ, ನಿಯಮಾವಳಿಗಳ / ವಿನ್ಯಾಸದ ಅನ್ವಯ ತಾಂತ್ರಿಕವಾಗಿ ಅವಶ್ಯವಿರುವ ಅಂಶ / ಪರಿಮಾಣಗಳನ್ನು ಮಾತ್ರ ಅನುವು ಮಾಡಿಕೊಂಡಿರುವ ಬಗ್ಗೆ ದೃಢೀಕರಿಸಿಕೊಂಡ ನಂತರ ಸಕ್ಷಮ ತಾಂತ್ರಿಕ ಪ್ರಾಧಿಕಾರವು ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು.

4. ಅಂದಾಜಿನಲ್ಲಿ ಮೀಸಲಿರಿಸಿರುವ ಇಡುಗಂಟು ಮೊತ್ತದ ಅಂಶಗಳಿಗೆ ಮತ್ತು Non SR ಅಂಶಗಳಿಗೆ / ಮಾರುಕಟ್ಟೆ ದರಗಳಿಗೆ ಸಕ್ಷಮ ಪ್ರಾಧಿಕಾರದಿಂದ ದರ ಮಂಜೂರಾತಿ ಪಡೆದುಕೊಂಡ ನಂತರವೇ ತಾಂತ್ರಿಕ ಅನುಮೋದನೆ ಪಡೆದು ಟೆಂಡರ್ ಆಹ್ವಾನಿಸುವುದು.

5. ಪ್ರಾಧಿಕಾರದ ನಿಧಿ ಬಳಕೆ ಮಾಡುವ ಬಗ್ಗೆ KUDA Act & KTCP Act ಅನ್ವಯ ಹೊರಡಿಸಿರುವ ಸರ್ಕಾರದ ಸುತ್ತೋಲೆ ಸಂಖ್ಯೆ: UDD 26 TTP 2025(ಇ), ದಿನಾಂಕ: 25.02.2026 ರಲ್ಲಿನ ಮಾರ್ಗಸೂಚಿಗಳ ಅನ್ವಯವೇ ಅನುಷ್ಠಾನಗೊಳಿಸಿ ವೆಚ್ಚಮಾಡತಕ್ಕದ್ದು (ಆಡಳಿತಾತ್ಮಕ ವೆಚ್ಚ ರೂ. ರೂ. 1.79 ಕೋಟಿಗಳನ್ನು ಒಳಗೊಂಡಂತೆ).

6. ಕಾಮಗಾರಿಯನ್ನು ಕಡ್ಡಾಯವಾಗಿ ಚಾಲ್ತಿ ಇಲಾಖಾ/ಪಾರದರ್ಶಕ ಕಾಯ್ದೆ ಮತ್ತು ನಿಯಮಗಳನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕ್ರಿಯೆ ಕೈಗೊಂಡು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಳ್ಳತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



7. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೇ ಕಾಮಗಾರಿ ಸ್ಥಳ ಬದಲಾವಣೆ ಅಥವಾ Material Deviation ಮಾಡತಕ್ಕದ್ದಲ್ಲ & ಯಾವುದೇ ಸಂದರ್ಭದಲ್ಲಿ ಅನುಮೋದನೆ ನೀಡಿರುವ ಮೊತ್ತವನ್ನು ಮೀರಿ ವೆಚ್ಚ ಮಾಡತಕ್ಕದ್ದಲ್ಲ.

8. ಕಾಮಗಾರಿಯಲ್ಲಿ ಬಿಡುಗಡೆಗೊಳ್ಳುವ ಉಪಯುಕ್ತ ಸಾಮಗ್ರಿಗಳನ್ನು ಲೆಕ್ಕಕ್ಕೆ ಪಡೆದು ಮರು ಬಳಕೆ ಮಾಡಿಕೊಳ್ಳುವುದು.

9. ಮೇಲಿನ ಕಾಮಗಾರಿಯನ್ನು ಉತ್ತಮ ಗುಣಮಟ್ಟದಿಂದ ನಿರ್ಮಿಸಲು 3rd party quality monitoring system ಅನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸತಕ್ಕದ್ದು ಮತ್ತು ಉತ್ತಮ ಗುಣಮಟ್ಟದಿಂದ ನಿರ್ಮಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವ ಸಂಪೂರ್ಣ ಜವಾಬ್ದಾರಿಯು ಪ್ರಾಧಿಕಾರದ್ದಾಗಿರುತ್ತದೆ.

ಈ ಆದೇಶವನ್ನು ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ:331/2026, ದಿನಾಂಕ:20.06.2026ರಂದು ನೀಡಿರುವ ಅನುಮೋದನೆಯನ್ವಯ ಹಾಗೂ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:FD749/EXP-9/2024, ದಿನಾಂಕ:30.05.2026 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು